ಬಿಪಿಎಲ್ ಮತ್ತು ಎಪಿಎಲ್ ಕಾರ್ಡುದಾರರ ವೆಚ್ಚ

997 (1519) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ಬಿಪಿಎಲ್ ಮತ್ತು ಎಪಿಎಲ್ ಕಾರ್ಡು ದಾರರಿಗೆ ಆಹಾರ ಸಾಮಗ್ರಿಗಳನ್ನು ವಿತರಿಸಲು ಎಷ್ಟು ಹಣವನ್ನು ಖರ್ಚು ಮಾಡುತ್ತಿದೆ?

ಆ) ಆ ಪೈಕಿ ಕೇಂದ್ರ ಸರ್ಕಾರದಿಂದ ಬರುವ ಹಣ ಮತ್ತು ರಾಜ್ಯ ಸರ್ಕಾರ ಮಾಡುತ್ತಿರುವ ಹಣ ಎಷ್ಟು? (ವಿವರ ನೀಡುವುದು);

ಇ) ದಕ್ಷಿಣ ಕನ್ನಡ ಜಿಲ್ಲೆಗೆ ಆಹಾರಧಾನ್ಯ ವಿತರಣೆಗೆ ಖರ್ಚು ಮಾಡುತ್ತಿರುವ ಹಣವೆಷ್ಟು? (ವಿವರ ನೀಡುವುದು);

ಶ್ರೀ ಹೆಚ್. ಹಾಲಪ್ಪ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ)

ರಾಜ್ಯದಲ್ಲಿರುವ ಒಟ್ಟು ಬಿಪಿಎಲ್ ಮತ್ತು ಇಬಿಪಿಎಲ್ ಕಾರ್ಡುಗಳು	ಪ್ರತೀ ಮಾಹೆಗೆ ಬಿಪಿಎಲ್ ಮತ್ತು ಇಬಿಪಿಎಲ್ ಕಾರ್ಡುದಾರರಿಗೆ ಬಿಡುಗಡೆಯಾದ ಸಹಾಯಧನ ಮತ್ತು ಸಾಗಾಣಿಕೆ ವೆಚ್ಚ	ಫೆಬ್ರವರಿ 2010ರ ಅಂತ್ಯಕ್ಕೆ ಬಿಡುಗಡೆಯಾದ ಒಟ್ಟು ಸಹಾಯಧನ ಮತ್ತು ಸಾಗಾಣಿಕೆ ವೆಚ್ಚ
63.24 ಲಕ್ಷ	ರೂ. 46.00 ಕೋಟಿ	ರೂ. 552.00 ಕೋಟಿ
ರಾಜ್ಯದಲ್ಲಿರುವ ನೆಮ್ಮದಿ ಕೇಂದ್ರದಡಿ ಇರುವ ಬಿಪಿಎಲ್ ಕಾರ್ಡುಗಳು	ಪ್ರತೀ ಮಾಹೆಗೆ ನೆಮ್ಮದಿ (ಬಿಪಿಎಲ್) ಕಾರ್ಡುದಾರರಿಗೆ ಬಿಡುಗಡೆಯಾದ ಸಹಾಯಧನ ಮತ್ತು ಸಾಗಾಣಿಕೆ ವೆಚ್ಚ	ಒಟ್ಟು ಫೆಬ್ರವರಿ 2010ರ ಅಂತ್ಯಕ್ಕೆ ಬಿಡುಗಡೆಯಾದ ಒಟ್ಟು ಸಹಯಧನ ಮತ್ತು ಸಾಗಾಣಿಕೆ ವೆಚ್ಚ
23.20 ಲಕ್ಷ	**ರೂ. 51.00 ಕೋಟಿ**	**ರೂ. 612.0 ಕೋಟಿ**

ರಾಜ್ಯ ಸರ್ಕಾರವು ಡಿಪಿಎಲ್ ಕಾರ್ಡುದಾರರಿಗೆ ಆಹಾರ ಸಹಾಯ ಧನವನ್ನು ನೀಡಿರುವುದಿಲ್ಲ.

ಆ) ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಯಾವುದೇ ಆಹಾರ ಸಹಾಯಧನವನ್ನು ಬಿಡುಗಡೆ ಮಾಡಿರುವುದಿಲ್ಲ. ಆದರೆ, ಕೇಂದ್ರ ಸರ್ಕಾರವು ಸಬ್ಸಿಡಿ ದರದಲ್ಲಿ ಆಹಾರಧಾನ್ಯಗಳನ್ನು ಹಂಚಿಕೆ ಮಾಡುತ್ತಿರುತ್ತಾರೆ. ಸದರಿ ಪಡಿತರ ಚೀಟಿಗಳಿಗೆ ರಾಜ್ಯ ಸರ್ಕಾರದಿಂದ ಆಹಾರ ಸಹಾಯಧನ ಭರಿಸಲಾಗುತ್ತಿದೆ.

ಇ) ದಕ್ಷಿಣ ಕನ್ನಡ ಜಿಲ್ಲೆಯ ಬಿಪಿಎಲ್ ಕಾರ್ಡುದಾರರಿಗೆ ಆಹಾರಧಾನ್ಯ ವಿತರಣೆಗೆ ಪ್ರತೀ ಮಾಹೆಗೆ ಆಹಾರ ಸಹಾಯಧನ ಮತ್ತು ಸಾಗಾಣಿಕೆ ವೆಚ್ಚಕ್ಕಾಗಿ ಸರಾಸರಿ ರೂ. 142.00 ಲಕ್ಷಗಳು ಬಿಡುಗಡೆ ಮಾಡಲಾಗಿರುತ್ತದೆ. 2009–10ನೇ ಸಾಲಿನ ಫೆಬ್ರವರಿ 2010ರ ಅಂತ್ಯದವರೆಗೆ ಆಹಾರ ಸಹಾಯಧನ ಮತ್ತು ಸಾಗಾಣಿಕೆ ವೆಚ್ಚಕ್ಕಾಗಿ ರೂ.1627.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಪಡಿತರ ಚೀಟಿ ವಿತರಣೆ

998 (979) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ದಿನಾಂಕ: 31–03–2008 ರವರೆಗೆ ವಿತರಿಸಲಾದ ಎಪಿಎಲ್ ಕಡ್ಡುಗಳು ಮತ್ತು ಬಿಪಿಎಲ್ ಕಾರ್ಡುಗಳೆಷ್ಟು;

ಆ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ 2008 ಜುಲೈ ತಿಂಗಳಿನಿಂದ ಈವರೆಗೆ ವಿತರಿಸಲಾದ ಎಪಿಎಲ್ ಕಾರ್ಡುಗಳು ಮತ್ತು ಬಿಪಿಎಲ್ ಕಾರ್ಡುಗಳೆಷ್ಟು;

ಇ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ 2008 ಜುಲೈ ತಿಂಗಳಿನಿಂದ ವಿತರಿಸಲಾದ ಎರಡು ಬಗೆಯ ಕಾರ್ಡುಗಳಲ್ಲಿ ಆಯೋಜಿತ ನ್ಯೂನತೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ ಯಾವ ಕಾರಣಕ್ಕೆ ಈವರೆಗೆ ಸರಿಪಡಿಸಲಾಗಿಲ್ಲ; ತಪ್ಪುಗಳನ್ನು ತಿದ್ದಲು ಅಡಚಣೆಯೇನು?